**ದಿನಾಂಕಃ 22.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃಃ 15 ನೇ ಪ್ರತಿವಾದಿ ಪರ ವಕೀಲರಿಂದಃ</u>**

Confirmation Deed ನಲ್ಲಿ ದಾವೆಯಲ್ಲಿ ಇಲ್ಲದ ಆಸ್ತಿಯನ್ನು ಸೇರಿಸಿದ್ದರು, ಹಾಗೇ ಸೇರಿಸಿದ ಆಸ್ತಿಯ ಸರ್ವೆ ನಂ.52/3 ಬಿ ಆಗಿರುತ್ತದೆ. ಇದರ ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಅಷ್ಟಾಗಿ ನೆನಪಿಗೆ ಬರುತ್ತಿಲ್ಲ. ಮೊದಲಿನ ದಾವೆಯನ್ನು ಸರ್ವೆ ನಂ.52/3 ಎ 1 ಮತ್ತು ಸರ್ವೆ ನಂ.52/3 ಎ 2 ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಕಿದ್ದೆನು. ಅವುಗಳ ವಿಸ್ತೀರ್ಣ ನನಗೆ ನೆನಪಿಗೆ ಬರುತ್ತಿಲ್ಲ. ಈ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ಮಾತ್ರ Confirmation Deed ನ್ನು ಬರೆದುಕೊಟ್ಟಿದೆನು. ಈ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ನಿಮ್ಮ ತಕರಾರು ಏನು ಇಲ್ಲವಲ್ಲ ಎಂದು ಕೇಳಿಕ್ಕೆ ಸಾಕ್ಷಿಯು ಹೌದು ಎಂದು ಹೇಳಿ ಆನಂತರ ಸರ್ವೆ ನಂ.52/3 ಎ 2 ರಲ್ಲಿ ಕೂಡಾ ನನಗೆ ಭಾಗ ಇದೆ ಎಂದು ಹೇಳಿರುತ್ತಾರೆ.

ಸರ್ವೆ ನಂ.52/3 ಬಿ ಆಸ್ತಿಯನ್ನು ಸೇರಿಸಿ Confirmation Deed ನ್ನು ಬರೆಸಿಕೊಂಡ ಕಾರಣ ಈ ದಾವೆಯನ್ನು ಹಾಕಿರುತ್ತೇನೆ. ಸರ್ವೆ ನಂ.52/3 ಬಿ ನನ್ನ ತಾತ ಖರೀದಿಸಿದ ಆಸ್ತಿಯಾಗಿರುತ್ತದೆ. ನನ್ನ ತಂದೆಯವರು 1980 ರಲ್ಲೇ ಸರ್ವೆ ನಂ.52/3 ಬಿ ನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. Confirmation Deed ಆದ ನಂತರ ನಾವೆಲ್ಲರೂ ನ್ಯಾಯಾಲಯಕ್ಕೆ ಹಾಜರಾಗಿ ಮೆಮೋವನ್ನು ಸಲ್ಲಿಸಿ ದಾವೆಯನ್ನು ವಜಾ ಮಾಡಿಸಿಕೊಂಡಿದ್ದೀರಾ ಎಂದು ಕೇಳಿದಕ್ಕೆ ಸಾಕ್ಷಿಯು ವಕೀಲರು ಹೊರಗಡೆ ಸಹಿಯನ್ನು ಪಡೆದುಕೊಂಡರು ಎಂದು ಉತ್ತರಿಸಿರುತ್ತಾರೆ. ನಿಪಿ16 ಎಂದು

ಗುರುತಿಸಿದ ಆದೇಶಿಕ ಪತ್ರಿಕೆಯಲ್ಲಿ ದಿನಾಂಕ 10.01.2013 ರಂದು ನಾನು ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿ. ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ನನ್ನ ಪರವಾಗಿ ಮಂಜುನಾಥ ವಕೀಲರು ಹಿಂದಿನ ದಾವೆಯಲ್ಲಿ ಹಾಜರಾಗಿದ್ದರು. ನಮ್ಮ ಸಹಿಗಳನ್ನು ಮಂಜುನಾಥ ವಕೀಲರು ಗುರುತಿಸಿದ್ದರು ಎಂದರೆ ಸರಿ. ಮಂಜುನಾಥ ವಕೀಲರು 15 ನೇ ಪ್ರತಿವಾದಿ ಜೊತೆ ಶಾಮಿಲಾಗಿ Confirmation Deed ಮತ್ತು ಮೆಮೋಗಳನ್ನು ಬರೆಸಿಕೊಂಡಿದ್ದರು ಎಂದು ಹೇಳಿ ಬಾರ್ ಕೌನ್ಸಿಲ್ ಗೆ ದೂರನ್ನು ಸಲ್ಲಿಸಿದೆವು. ಈ ಸಂಬಂಧ ದಾಖಲಾತಿಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ. ನಾನು ಈ ಸಂಬಂಧ ಪೊಲೀಸರಿಗೆ ದೂರನ್ನು ನೀಡಿಲ್ಲ. ಪೊಲೀಸರಿಗೆ ದೂರು ಕೊಡಲು ತೊಂದರೆ ಇತ್ತೇ ಎಂದು ಕೇಳಿದಕ್ಕೆ ನನಗೆ ಅಷ್ಟೆಲ್ಲಾ ಜ್ಞಾನ ಇಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಬಾರ್ ಕೌನ್ಸಿಲ್ ಗೆ ದೂರನ್ನು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜುನಾಥ ವಕೀಲರು ಮತ್ತು 15 ನೇ ಪ್ರತಿವಾದಿ ನಮಗೆ ಯಾವುದೇ ಮೋಸವನ್ನು ಮಾಡಿಲ್ಲ, ನಾವುಗಳು ಸ್ವಇಚ್ಛೆಯಿಂದ Confirmation Deed ನ್ನು ಬರೆದುಕೊಟ್ಟು ನಂತರ ನ್ಯಾಯಾಲಯದ ಮುಂದೆ ಹಾಜರಾಗಿ ಸ್ವಇಚ್ಛೆಯಿಂದ ಮೆಮೋಗೆ ಸಹಿಗಳನ್ನು ಹಾಕಿ ಆನಂತರ ಆದೇಶ ಪತ್ರಿಕೆಗೆ ಸಹಿಗಳನ್ನು ಹಾಕಿದ್ದೆವು ಎಂದರೆ ಸರಿಯಲ್ಲ. ಯಾವುದೇ ಮೋಸ ಆಗದ ಕಾರಣ ನಾನು ಬಾರ್ ಕೌನ್ಸಿಲ್ ಗೆ ಇಲ್ಲ, ಪೊಲೀಸರಿಗೆ ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ.

Confirmation Deed ಗಳನ್ನು ಬರೆದುಕೊಟ್ಟ ಸಂದರ್ಭದಲ್ಲಿ 15 ನೇ ಪ್ರತಿವಾದಿ ರೂ.16 ಲಕ್ಷ ಗಳನ್ನು ನಮಗೆ ನೀಡಿದ್ದರು. ಸದರಿ ಹಣವನ್ನು ನನ್ನ ತಮ್ಮನ

ಹೆಸರಿಗೆ ಕೊಟ್ಟಿದ್ದರು. ಸರ್ವೆ ನಂ.52/3 ಬಿ ಆಸ್ತಿಯ ಖಾತೆ 15 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 15 ನೇ ಪ್ರತಿವಾದಿ ಈ ಆಸ್ತಿಯನ್ನು ಕೃಷಿಯೇತರ ಜಮೀನಾಗಿ ಪರಿವರ್ತನೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಯ ಖಾತೆ 15 ನೇ ಪ್ರತಿವಾದಿಯ ಹೆಸರಿಗೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. 2013 ರಲ್ಲಿ 15 ನೇ ಪ್ರತಿವಾದಿಯ ಹೆಸರಿಗೆ ಆದ ಬಗ್ಗೆ ನನಗೆ ತಿಳಿದು ಬಂದಿತು. ಖಾತೆ ಬದಲಾವಣೆಯನ್ನು ಪ್ರಶ್ನಿಸಿದ್ದೀರಾ ಎಂದು ಕೇಳಿದಕ್ಕೆ ತಹಸೀಲ್ದಾರ್ ಕಛೇರಿಗೆ ದೂರು ಕೊಟ್ಟಿದ್ದೆ ಎಂದು ಉತ್ತರಿಸಿರುತ್ತಾರೆ. ದೂರನ್ನು ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಂದೆಯವರು ಎಷ್ಟು ವರ್ಷದ ಹಿಂದೆ ತೀರಿ ಹೋಗಿದ್ದರು ಮತ್ತು ಯಾವ ದಿನಾಂಕದಂದು ತೀರಿ ಹೋಗಿದ್ದರು ಎಂದು ನನಗೆ ನೆನಪಿಲ್ಲ. ನನ್ನ ತಂದೆಯವರು ಸದರಿ ಕ್ರಯ ಪತ್ರವನ್ನು ತಮ್ಮ ಜೀವಿತ ಕಾಲದಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಕ್ರಯ ಪತ್ರವನ್ನು ಬರೆದುಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ಶಾಂತಣ್ಣ ಎಂ.ಆಳ್ವ)**
(ಪ್ರಭಾರ) 31 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.